Code No. **10 X(A)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

ಜನವರಿ, 2019

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಬದುಕಿನ ಪ್ರಯಾಣ ರೋಚಕವಾದದು, ಅದೊಂದು ಅನಿರೀಕ್ಷಿತ ಬೆಳವಣಿಗೆಗಳ ಆಗರ. ಯಾವಾಗ ಏನು ಸಂಭವಿಸುತ್ತದೆ ಎಂಬುದು ನಿಗೂಢ, ಅತಿ ಜಾಗರೂಕತೆಯಿಂದ ತಲೆ ಕೆಡಿಸಿಕೊಂಡು ಮಾಡುವ ಉಪಾಯಗಳು ಅನೇಕ ಬಾರಿ ಕೈಗೂಡುವುದಿಲ್ಲ. ಯಾವುದೇ ನಿರ್ದಿಷ್ಟ ಉಪಾಯ ಇಲ್ಲದಿದ್ದರೂ ಕೆಲವೊಮ್ಮೆ ಅನಿರೀಕ್ಷಿತ ಯಶಸ್ಸು ಆಗುವುದು ಉಂಟು. ಮನುಷ್ಯ ಮೂಲತಃ, ಸಂಘಜೀವಿ, ಒಟ್ಟಾಗಿ ಬದುಕುವುದು ಅವನ ಮೂಲಗುಣ. ಎಲ್ಲಾ ತರಹದ ಜನರೊಂದಿಗೆ ಅವರವರ ಭಾವನೆ ಹಾಗೂ ವಿಚಾರಗಳಿಗೆ ಸಾಂದರ್ಭಿಕವಾಗಿ ಹೊಂದಾಣಿಕೆ ಮಾಡಿಕೊಂಡು ಬದುಕುವ ಚಾತುರ್ಯ ಅವರಲ್ಲಿ ಇದೆ, ಆದುದರಿಂದಲೇ ಮನುಷ್ಯನನ್ನು ಸಾಮಾಜಿಕ ಜೀವಿ ಎಂದು ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದಾರೆ. ನಾಗರಿಕ ಸಾಮಾಜದಲ್ಲಿ ಬದುಕುವ ನಾವೆಲ್ಲರೂ ಆ ಸಮಾಜದಲ್ಲಿನ ಸ್ವಾತಂತ್ರ್ಯ ಮತ್ತು ಕಟ್ಟುಪಾಡುಗಳನ್ನು ಏಕಕಾಲದಲ್ಲಿ ಅನುಭವಿಸಬೇಕಾಗುತ್ತದೆ.

ಪ್ರತಿಯೊಂದು ಸಮಜಕ್ಕೂ, ತನ್ನದೇ ಆದ ಸಾಮಾಜಿಕ ಕಟ್ಟಳೆಗಳ ಚೌಕಟ್ಟು ಇದ್ದೇ ಇರುತ್ತದೆ. ಒಂದು ಆರೋಗ್ಯವಂತ ಸಮಾಜ ಪ್ರಗತಿ ಪರವಾಗಿ ಮುನ್ನಡೆಯಲು ಅಲ್ಲಿರುವ ಎಲರೂ ಈ ಕಟ್ಟಳೆಗಳನ್ನು ಹಾಗೂ ತಪ್ಪದೆ ಪಾಲಿಸಬೇಕಾಗುತ್ತದೆ. ಅದಕ್ಕಾಗಿಯೇ ಸಂವಿಧಾನ, ಕಾನೂನು, ನಿಯಮ ಹಾಗೂ ಸಂಪ್ರದಾಯಬದ್ಧ ಆಚರಣೆಗಳು ಜಾರಿಯಲ್ಲಿ ಇರುತ್ತದೆ. ಇವುಗಳಲ್ಲಿ ಕೆಲವು ಲಿಖಿತ ಆಗಿದ್ದರೆ ಮತ್ತೆ ಕೆಲವು ಅಲಿಖಿತ ರೂಪದಲ್ಲಿ ಇರುತ್ತದೆ. ಇವುಗಳಲ್ಲಿ ಲಿಖಿತ

ಕಾನೂನನ್ನು ಉಲ್ಲಂಘಿಸಿದರೆ ಶಿಕ್ಷೆ ಕಟ್ಟಿಟ್ಟ ಬುತ್ತಿ, ಇದೇ ಮಾತು ಅಲಿಖಿತ ನಿಯಮಗಳಿಗೆ ಅನ್ವಯ ಆಗುವುದಿಲ್ಲ. ಕೂಡಿ ಬಾಳುವುದು ಈ ಮಣ್ಣಿನ ಗುಣ, ವೈವಿಧ್ಯಮಯ ಹಾಗೂ ಭಿನ್ನ ಆಲೋಚನೆಗಳ ವ್ಯಕ್ತಿತ್ವಗಳೊಂದಿಗೆ ಒಳನಾಟ ಇರಿಸಿಕೊಂಡು ಬಾಳ್ವೆ ನಡೆಸಬೇಕಾಗುತ್ತದೆ. ಒಂದೇ ಸೂರಿನ ಅಡಿಯಲ್ಲಿ ಎಲ್ಲಾ ರೀತಿಯ ಕಷ್ಟ, ಸುಖ, ನೋವು, ನಲಿವು ಹಾಗೂ ತಿರಸ್ಕಾರ, ಪುರಸ್ಕಾರಗಳನ್ನು ಅನುಭವಿಸಬೇಕಾಗಾತ್ತದೆ. ನಮ್ಮ ದೇಶದ ಕೂಡು ಕುಟುಂಬ ಪದ್ಧತಿ ಇಂತಹ ಅದ್ಭುತ ಪಾಠಗಳನ್ನು ಹಲವಾರು ಶತಮಾನಗಳಿಂದ ಹೇಳಿ ಕೊಟ್ಟಿದೆ ಹಾಗೂ ಕೌಟುಂಬಿಕ ವ್ಯವಸ್ಥೆಯ ಒಳನೋಟಗಳನ್ನು ಪರಿಚಯಿಸುತ್ತಾ ಇದೆ.

ಸಹಕಾರ, ಸಂಯಮ, ಹೊಂದಾಣಿಕೆ ಇತ್ಯಾದಿ ಮೌಲ್ಯಗಳೊಂದಿಗೆ ಅವಿಭಕ್ತ ಕುಟುಂಬಗಳು ನೀಡುತ್ತಿದ್ದ ಭಾವನಾತ್ಮಕ ಭದ್ರತೆಗೆ ಯಾವುದೇ ರೀತಿಯ ಸರಿಸಾಟಿ ಇರಲಿಲ್ಲ. ಮೇಲಾಗಿ ಹಂಚಿಕೊಂಡು ಬಾಳುವ ಹಾಗೂ ಸ್ವಾರ್ಥ ರಹಿತವಾಗಿ ಬದುಕುವ, ಕಲೆಯನ್ನು ಅವು ಕಲಿಸುತ್ತಾ ಇದ್ದವು. ಒಬ್ಬರಿಗೆ, ಒಬ್ಬರು ಅರ್ಥ ಮಾಡಿಕೊಂಡು ಎಲ್ಲರ ಹಿತಕ್ಕಾಗಿ ಅವಿಭಕ್ತ ಕುಟುಂಬಗಳು ಕಣ್ಮರೆ ಆಗಿವೆ. ಹಾಗೂ ಗ್ರಾಮೀಣ ಪ್ರದಶಗಳಲ್ಲಿನ ಸ್ಥಿತಿ ಚಿಂತಾಜನಕ ಆಗಿದೆ. ಮನೆಯಲ್ಲಿ ಒಬ್ಬ ಯಜಮಾನನ ಜಾಗದಲ್ಲಿ ಹಲವು ಯಜಮಾನರು ಈಗ ಹುಟ್ಟಿ ಕೊಂಡಿದ್ದಾರೆ. ಇಂತಹ ಪರಿಸ್ಥಿತಿಯು ಸೃಷ್ಟಿಯಾಗಿದೆ, ಭೂಮಿ ವಿಭಜನೆ ಮಾಡಿ ಹಂಚಿಕೊಂಡು ಕುಟುಂಬಗಳು ಛಿದ್ರವಾಗಿವೆ.